ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**

**( ಮುಂದುವರೆದ ಉಪವೇಶನಗಳು )**

**ಗುರುವಾರ, ದಿನಾಂಕ: ೧೨ನೇ ಮಾರ್ಚ್, ೨೦೨೬**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ಜಿ.ಬಿ.ಎ. ವ್ಯಾಪ್ತಿಯ ಸಾರ್ವಜನಿಕ ಶೌಚಾಲಯಗಳ ಅವ್ಯವಸ್ಥೆ ಕುರಿತು

**ಡಾ. ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) –**

೧೦೬ (೧೧೦೨) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಿ.ಬಿ.ಎ. ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಅವ್ಯವಸ್ಥೆಯನ್ನು ಸರಿಪಡಿಸುವ ಸಂಬಂಧ ಯಾವುದಾದರು ಸ್ವಯಂಸೇವಾ ಸಂಸ್ಥೆಯವರು

ವರದಿಯನ್ನು ಸಲ್ಲಿಸಿದ್ದಾರೆಯೇ ; ಸಲ್ಲಿಸಿದ್ದಲ್ಲಿ, ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಆ) ಸದರಿ ಸಾರ್ವಜನಿಕ ಶೌಚಾಲಯಗಳಲ್ಲಿ ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕ ಪಡೆಯುತ್ತಿರುವುದು ಜಿ.ಬಿ.ಎ. ಗಮನದಲ್ಲಿದೆಯೇ ; ಇದ್ದಲ್ಲಿ, ಅಂತಹ ಪ್ರಕರಣಗಳ ಕುರಿತು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ;

(ಇ) ಸದರಿ ಸಾರ್ವಜನಿಕ ಶೌಚಾಲಯಗಳಲ್ಲಿ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಹಿಳೆಯರಿಗೆ ಮಾಡಿರುವುದರ ಹಿನ್ನೆಲೆಯಲ್ಲಿ, ಅವರ ಸುರಕ್ಷತೆಗೆ ಪೂರಕವಾಗಿ ಎಲ್ಲಾ ಸಾರ್ವಜನಿಕ ಶೌಚಾಲಯಗಳಲ್ಲಿ ಸಿ.ಸಿ. ಕ್ಯಾಮರಗಳನ್ನು ಅಳವಡಿಸಲಾಗಿದೆಯೇ ; ಇಲ್ಲದಿದ್ದರೆ, ಇಲ್ಲಿಯುವರೆವಿಗೂ ವಿಳಂಬವಾಗಿರುವುದಕ್ಕೆ ಕಾರಣಗಳೇನು ?

## ಅಬಕಾರಿ ಇಲಾಖೆಯಿಂದ ಸಂಗ್ರಹಿಸಲಾದ ಆದಾಯದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೭ (೧೦೭೯) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಬಕಾರಿ ಇಲಾಖೆ ವತಿಯಿಂದ ೨೦೨೫–೨೬ನೇ ಸಾಲಿಗೆ ಸುಮಾರು ೪೦,೦೦೦ ಕೋಟಿ ರೂ.ಗಳ ಗುರಿಯನ್ನು ಹೊಂದಿದ್ದು, ಜನವರಿ–೨೦೨೬ ವೇಳೆಗೆ ಸುಮಾರು ೩೩,೦೦೦ ಕೋಟಿ ರೂ.ಗಳ ಅಂದಾಜು ಆದಾಯ ಗಳಿಸಿರುವುದು ನಿಜವೇ ; ಇಲ್ಲವಾದಲ್ಲಿ ಇಲಾಖೆಯು ಗಳಿಸಿರುವ ವಾಸ್ತವಿಕ ಆದಾಯವೆಷ್ಟು ; ಹೆಚ್ಚಿನ ಲೆವಿ ಹೊರತಾಗಿಯೂ ಮದ್ಯ ಮಾರಾಟದ ಪ್ರಮಾಣ ಯಾವ ಕಾರಣಗಳಿಂದಾಗಿ ಕುಸಿತ ಕಂಡಿದೆ ;

(ಆ) ಸರ್ಕಾರದ ವತಿಯಿಂದ ಪದೇಪದೇ ಮದ್ಯದ ಮೇಲೆ ತೆರಿಗೆಗಳನ್ನು ಹೆಚ್ಚಿಸುತ್ತಿರುವುದು ಮದ್ಯ ಮಾರಾಟದಲ್ಲಿ ನಿಧಾನಗತಿ ಕಂಡಿದ್ದು ನಿಜವೇ ಇದ್ದಲ್ಲಿ, ಮದ್ಯ ಬೇಡಿಕೆಯಲ್ಲಿ ಮತ್ತಷ್ಟು ಕುಸಿಯುವುದನ್ನು ತಡೆಯಲು ಸರ್ಕಾರ ೨೦೨೬–೨೭ನೇ ಸಾಲಿನ ಆಯವ್ಯಯದಲ್ಲಿ ತೆರಿಗೆ ಹೆಚ್ಚಳವನ್ನು ನಿಲ್ಲಿಸುವುದೇ ;

(ಇ) ಗೋವಾದಿಂದ ನಕಲಿ ಮದ್ಯ ಮತ್ತು ಆಂಧ್ರಪ್ರದೇಶದಿಂದ "ಸಿಹೆಚ್ ಪೌಡರ್" (ಕ್ಲೋರಲ್ ಹೈಡ್ರೇಟ್) ಮಿಶ್ರಿತ ಮದ್ಯ ಹೊಂದಿದ್ದು, ಇದನ್ನು ಬೆಳಗಾವಿ ಮತ್ತು ರಾಯಚೂರಿನಂತಹ ಜಿಲ್ಲೆಗಳಲ್ಲಿ ಒಳಹರಿವನ್ನು (inflow) ತಡೆಯಲು ಇಲಾಖೆಯ Special Task Force ಯಾವ ಕ್ರಮಗಳನ್ನು ಕೈಗೊಂಡಿದೆ ?

## ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಂದ ಸಾರ್ವಜನಿಕ ಸೇವೆಗಳಲ್ಲಿ ಸಮಸ್ಯೆಗಳು ಹೆಚ್ಚುತ್ತಿದ್ದು ಶೀಘ್ರವಾಗಿ ನೇಮಕಾತಿಗಳನ್ನು ಮಾಡುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೧೦೮ (೧೧೨೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ರಾಜ್ಯ ಸರ್ಕಾರದಿಂದ ವಿವಿಧ ಇಲಾಖೆಗಳಲ್ಲಿ ೨.೮೪ ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇರುವುದು ನಿಜವೇ ; ಇದ್ದಲ್ಲಿ, ಇಷ್ಟು ದೊಡ್ಡ ಪ್ರಮಾಣದ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕ ಸೇವೆಗಳನ್ನು ನೀಡುವಲ್ಲಿ ಸರ್ಕಾರ ಎದುರಿಸುತ್ತಿರುವ ಆರ್ಥಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳು ಯಾವುವು ;

(ಆ) ಖಾಲಿ ಇರುವ ಹುದ್ದೆಗಳಿಂದಾಗಿ ಸಾರ್ವಜನಿಕ ಸೇವೆಗಳು ನೀಡುವಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ಎದುರಾಗದಂತೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಮಾನ್ಯ ಹೈಕೋರ್ಟ್‌ನ ಮೌಖಿಕ ಆದೇಶದಂತೆ ಹಾಲಿ ಚಾಲ್ತಿಯಲ್ಲಿರುವ ೫೬% ಮೀಸಲಾತಿ ಪ್ರಕರಣವು ಇತ್ಯರ್ಥವಾಗುವವರೆಗೆ ಹಳೆಯ ೫೦% ಮೀಸಲಾತಿ ಮತ್ತು ರೋಸ್ಟರ್‌ನ ಅಡಿಯಲ್ಲೇ ನೇಮಕಾತಿಯನ್ನು ಮಾಡಿಕೊಳ್ಳಬಹುದಲ್ಲವೇ ; ಈ ಕುರಿತು ಸರ್ಕಾರದ ನಿಲುವೇನು ;

(ಈ) ನೇಮಕಾತಿಯಲ್ಲಿ ವಿಳಂಬವಾಗಿದೆ ಎಂದು ೫ ವರ್ಷ ವಯೋಮಿತಿ ಸಡಿಲಿಕೆ ಮಾಡಿದ್ದು ಯಾವುದೇ ನೇಮಕಾತಿಯನ್ನು ಮಾಡದೇ ಇದ್ದರೇ

ವಯೋಮಿತಿ ಸಡಿಲಿಕೆ ಮಾಡಿರುವ ಪ್ರಯೋಜನವೇನು ; ಮುಂಬರುವ ನೇಮಕಾತಿ ಅಧಿಸೂಚನೆ ಆಗುವವರೆಗೂ ಮತ್ತೊಮ್ಮೆ ವಯೋಮಿತಿ ಸಡಿಲಿಕೆಯನ್ನು ವಿಸ್ತರಣೆ ಮಾಡಲಾಗುತ್ತದೆಯೇ ? (ಸ್ಪಷ್ಟನೆ ನೀಡುವುದು)

## ಗೃಹ ನಿರ್ಮಾಣ ಸಂಘಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೧೦೯ (೧೦೪೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನಲ್ಲಿ ಇರುವ ಒಟ್ಟು ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು ; (ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

(ಆ) ಈ ಸಹಕಾರ ಸಂಘಗಳು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿವೆ ; (ವಿವರ ನೀಡುವುದು)

(ಇ) ಈ ಸಹಕಾರ ಸಂಘಗಳು ನಿವೇಶನ ಹಂಚಿಕೆ ಸಲುವಾಗಿ ಖರೀದಿಸಿದ ಭೂ ವಿಸ್ತೀರ್ಣವೇನು ; ಇದಕ್ಕೆ ಹಾಕಿದ ಬಂಡವಾಳವೇನು ; (ಸಂಪೂರ್ಣ ವಿವರ ನೀಡುವುದು)

(ಈ) ಈ ಸಹಕಾರ ಸಂಘಗಳು ಎಷ್ಟು ನಿವೇಶನದಾರರುಗಳಿಗೆ ನಿವೇಶನ ಹಂಚಿಕೆ ಮಾಡಿವೆ ; (ಹೆಸರು, ವಿಳಾಸ, ನಿವೇಶನದ ಅಳತೆಯೊಂದಿಗೆ ವಿವರ ನೀಡುವುದು)

(ಉ) ನಿವೇಶನದಾರರಿಗೆ ನಿವೇಶನ ನೀಡದೇ ವರ್ಷಗಟ್ಟಲೆಯಿಂದ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಊ) ಈ ಸಹಕಾರ ಸಂಘಗಳು ತನ್ನ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡದೇ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡಿರುವ ಬಗ್ಗೆ ರೇರಾ ಕಾಯ್ದೆಯ ಪ್ರಕಾರ ಕ್ರಮ ಕೈಗೊಳ್ಳಲಾಗಿದೆಯೇ ?

## ಆಡಳಿತ ಸುಧಾರಣೆ ಕುರಿತಂತೆ ಹಾರನಹಳ್ಳಿ ರಾಮಸ್ವಾಮಿ ಆಯೋಗದ ವರದಿ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೧೧೦ (೧೦೮೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆಡಳಿತ ಸುಧಾರಣೆ ಕುರಿತಂತೆ ಹಾರನಹಳ್ಳಿ ರಾಮಸ್ವಾಮಿ ಆಯೋಗದಿಂದ ಇಲ್ಲಿಯವರೆಗೆ ಯಾವ ಯಾವ ವರದಿಗಳನ್ನು ಪಡೆಯಲಾಗಿದೆ ; (ಇತ್ತೀಚೆಗೆ ಶ್ರೀ ಟಿ.ಎಂ. ವಿಜಯಭಾಸ್ಕರ್, ಮಾಜಿ ಮುಖ್ಯ ಕಾರ್ಯದರ್ಶಿಗಳ ವರದಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ದೇಶಪಾಂಡೆಯವರು ನೀಡಿರುವ ವರದಿಯ ತನಕ)

(ಆ) ಸದರಿ ವಿವಿಧ ವರದಿಗಳಲ್ಲಿ ಸರ್ಕಾರ ಅಳವಡಿಸಿಕೊಂಡಿರುವ ಅಂಶಗಳ ಮಾಹಿತಿ ಒದಗಿಸುವುದು ;

(ಇ) ಸರ್ಕಾರದ ಪರಿಶೀಲನೆಯಲ್ಲಿರುವ ಅಂಶಗಳ ಬಗ್ಗೆ ವಿವರವಾದ ಮಾಹಿತಿ ಒದಗಿಸುವುದು ;

(ಈ) ಆಡಳಿತ ಸುಧಾರಣೆ ಕುರಿತಂತೆ ಕೆಲವು ಇಲಾಖೆಗಳನ್ನು ಇತರೆ ಇಲಾಖೆಗಳೊಂದಿಗೆ ಮಿಳಿತಗೊಳಿಸುವಂತೆ (Merge) ಶಿಫಾರಸ್ಸು ಮಾಡಿರುವ ವಿವರವನ್ನು ಒದಗಿಸುವುದು ; ಈ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು ?

## ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಬಾಗಲಕೋಟೆ ನಗರದಲ್ಲಿನ ಮುಸ್ಲಿಂ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿರುವ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೧ (೧೧೨೬) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ BTDA ಪ್ರಾಧಿಕಾರದ ವತಿಯಿಂದ ಮುಸ್ಲಿಂ ಅಲ್ಪಸಂಖ್ಯಾತರ ಸಮುದಾಯಗಳಿಗೆ ಯೂನಿಟ್–೧ & ೨ರಲ್ಲಿ ಇಂದಿನವರೆಗೆ ನೀಡಲಾದ

ಒಟ್ಟು ನಿವೇಶನಗಳೆಷ್ಟು ; (ನಿವೇಶನ ಸಂಖ್ಯೆ, ನಿವೇಶನ ಕ್ಷೇತ್ರ, ಸೆಕ್ಟರ್‌ವಾರು ಮಾಹಿತಿ ನೀಡುವುದು)

(ಆ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಬಾಗಲಕೋಟೆ ನಗರದಲ್ಲಿನ ಮುಸ್ಲಿಂ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮಸೀದಿ, ದರ್ಗಾ, ಮದರಸಾ, ಈದ್ಗಾ ಇತ್ಯಾದಿ ಸ್ವಾಧೀನಪಡಿಸಿಕೊಂಡ ಆಸ್ತಿಗಳ ಸಂಖ್ಯೆ ಎಷ್ಟು ; (ಸ್ವಾಧೀನಪಡಿಸಿಕೊಂಡ ಸದರಿ ಆಸ್ತಿಗಳ ಹೆಸರುಗಳು, ಆಸ್ತಿ ಸಂಖ್ಯೆ, ವಾರ್ಡ್‌ವಾರು, ವಿಸ್ತೀರ್ಣವಾರು ವಿವರವಾದ ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು)

(ಇ) ಸದರಿ ಆಸ್ತಿಗಳ ಮುಳುಗಡೆಯಿಂದಾಗಿ ಬಾಗಲಕೋಟೆ ನವನಗರದಲ್ಲಿ ಸದರಿ ಆಸ್ತಿಗಳ ಪುನರ್ ನಿರ್ಮಾಣಕ್ಕಾಗಿ ಬಿಟಿಡಿಎಯಿಂದ ಪರ್ಯಾಯವಾಗಿ ನೀಡಲಾದ ನಿವೇಶನ ಸಂಖ್ಯೆ, ಪ್ರತಿಯೊಂದರ ವಿಸ್ತೀರ್ಣ, ಸೆಕ್ಟರ್‌ವಾರು ಮತ್ತು ಯೂನಿಟ್‌ವಾರು ಸದರಿ ಆಸ್ತಿಗಳ ಹೆಸರುಗಳೊಂದಿಗೆ ನೀಡಲಾದ ದಿನಾಂಕ ಸಹಿತ ವಿವರವಾಗಿ, ಪ್ರತ್ಯೇಕವಾಗಿ ನೀಡುವುದು ;

(ಈ) ಯಾವ ಯಾವ ನಿವೇಶನಗಳಲ್ಲಿ ಕಟ್ಟಡ ಕಟ್ಟಲು BTDA ಯಿಂದ ಅನುಮತಿ ನೀಡಲಾಗಿದೆ ? (ಈ ಕುರಿತಂತೆ ಯೂನಿಟ್ ಸಂಖ್ಯೆ, ಸೆಕ್ಟರ್ ಸಂಖ್ಯೆ, ನಿವೇಶನ ಸಂಖ್ಯೆ, ಅನುಮತಿಯ ದಿನಾಂಕಗಳನ್ನು ಕೂಡ ವಿವರವಾಗಿ ನೀಡುವುದು)

## ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷರುಗಳಿಗೆ ಸಚಿವರ ಸ್ಥಾನಮಾನ ನೀಡಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೧೧೨ (೧೧೦೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನಿಗಮ, ಮಂಡಳಿ ಮತ್ತು ಪ್ರಾಧಿಕಾರಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ರಾಜ್ಯದಲ್ಲಿರುವ ಪೂರ್ಣ ಪ್ರಮಾಣದ ಸಚಿವರ ಸಂಖ್ಯೆ ಎಷ್ಟು ; ಎಷ್ಟು ಜನ ಶಾಸಕರಿಗೆ ಸಂಪುಟ ದರ್ಜೆ ಸ್ಥಾನಮಾನ ಮತ್ತು ರಾಜ್ಯ ಸಚಿವ ಸ್ಥಾನಮಾನ ನೀಡಲಾಗಿದೆ ; ಎಷ್ಟು ಜನ ಶಾಸಕರಲ್ಲದವರಿಗೆ ಸಂಪುಟ ದರ್ಜೆ ಸ್ಥಾನಮಾನ/ರಾಜ್ಯ ಸಚಿವರ ಸ್ಥಾನಮಾನ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಸಚಿವ ಸ್ಥಾನಮಾನ ನೀಡಿರುವವರಿಗೆ ಒದಗಿಸಲಾಗಿರುವ ಸೌಲಭ್ಯಗಳೇನು ; ವಾರ್ಷಿಕವಾಗಿ ಇದಕ್ಕೆ ತಗಲುವ ವೆಚ್ಚವೆಷ್ಟು ; (ಸ್ಥಾನಮಾನವಾರು ಪ್ರತ್ಯೇಕವಾಗಿ ವಿವರ ನೀಡುವುದು)

(ಈ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳಿಗೆ ಸರ್ಕಾರದಿಂದ ನೀಡಲಾದ ಅನುದಾನವೆಷ್ಟು ; ಅವುಗಳಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ;

(ಉ) ನಿಗಮ, ಮಂಡಳಿಗಳ ಮತ್ತು ಪ್ರಾಧಿಕಾರಗಳ ಅಧ್ಯಕ್ಷರುಗಳಿಗೆ ಸಚಿವರ ಸ್ಥಾನಮಾನ ನೀಡುವುದರಿಂದ ಅವುಗಳಲ್ಲಿ ಅನುದಾನದ ಕೊರತೆಯುಂಟಾಗಿ ಯೋಜನೆಗಳ ಜಾರಿಗೆ ತೊಂದರೆಯುಂಟಾಗುವುದಿಲ್ಲವೇ ?

## ಬ್ಯಾಂಕ್ ಖಾತೆಯನ್ನು ತೆರೆದಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೧೧೩ (೧೦೭೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬ್ಯಾಂಕ್ ಖಾತೆಯನ್ನು ಹೊಸದಾಗಿ ತೆರೆಯಲು ಆರ್ಥಿಕ ಇಲಾಖೆಯಿಂದ ನಿರ್ದೇಶನಗಳನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ, ಇಲಾಖಾವಾರು ಅದೇ ನಿರ್ದೇಶನವನ್ನು ಪಾಲನೆ ಮಾಡುತ್ತಿದ್ದಾರೆಯೇ ; ಪಾಲನೆ ಮಾಡದಿದ್ದಲ್ಲಿ ಸದರಿಯವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/೦೫/ಟಿ.ಎ.ಆರ್/೨೦೧೭, ದಿನಾಂಕ ೩೦–೧೧–೨೦೧೭ರ ಪ್ರಕಾರ ಎಷ್ಟು ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (ಆರ್.ಡಿ.ಪಿ.ಆರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು) ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು, ಸೊಸೈಟಿಗಳು ದಿನಾಂಕ: ೩೧–೧೧–೨೦೧೭ರ ನಂತರ ತೆರೆಯಲಾಗಿರುವ ಬ್ಯಾಂಕ್ ಖಾತೆಗಳಿಗೆ ಆರ್ಥಿಕ ಇಲಾಖೆಯ ಸಮ್ಮತಿ/ಅನುಮೋದನೆಯನ್ನು ಪಡೆಯಲಾಗಿದೆಯೇ ; ಪಡೆದಿದ್ದಲ್ಲಿ, ಸಂಪೂರ್ಣವಾದ ಮಾಹಿತಿಯನ್ನು ನೀಡುವುದು ;

(ಇ) ಸದರಿ ಸರ್ಕಾರದ ಆದೇಶದ ಪ್ರಕಾರ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯ ಪ್ರಧಾನ ವ್ಯವಸ್ಥಾಪಕರಿಗೆ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗಳ ಅಂಕಿ ಅಂಶಗಳನ್ನು ಒಳಗೊಂಡ ಮಾಹಿತಿಯನ್ನು ಒಂದು ತಿಂಗಳೊಳಗೆ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (ಆರ್‌ಡಿಪಿಆರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು) ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು, ಸೊಸೈಟಿಗಳು ನೀಡಲು ಸೂಚಿಸಲಾಗಿತ್ತು ; ಸದರಿ ಆದೇಶದ ಅನ್ವಯ ಮಾಹಿತಿಯನ್ನು ಒದಗಿಸಲಾಗಿದೆಯೇ ; (ಅಂಕಿ ಅಂಶಗಳನ್ನು ಒಳಗೊಂಡ ಮಾಹಿತಿಯನ್ನು ಒದಗಿಸುವುದು)

(ಈ) ಸರ್ಕಾರದ ಆದೇಶದ ಪ್ರಕಾರ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯು ಆರು ತಿಂಗಳೊಳಗೆ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು (ಆರ್‌ಡಿಪಿಆರ್ ಮತ್ತು ನಗರ ಸ್ಥಳೀಯ ಸಂಸ್ಥೆಗಳು) ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು ಸೊಸೈಟಿಗಳು ಹೊಂದಿರುವ ಖಾತೆಗಳ ಅಂಕಿ–ಅಂಶಗಳನ್ನು ಬ್ಯಾಂಕ್‌ಗಳಿಂದ ಪಡೆಯಲು ನೀಡಲು ಸೂಚಿಸಲಾಗಿದೆಯೇ ಸದರಿ ಆದೇಶದ ಅನ್ವಯ ಮಾಹಿತಿಯನ್ನು ಪಡೆಯಲಾಗಿದೆಯೇ ; ಅಂಕಿ ಅಂಶಗಳನ್ನು ಒಳಗೊಂಡ ಮಾಹಿತಿಯನ್ನು ಒದಗಿಸುವುದು ;

(ಉ) ಮೇಲ್ಕಂಡ ಆದೇಶದನ್ವಯ ಪಡೆಯಲಾದ ಅಂಕಿ–ಅಂಶಗಳನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯ ಮೌಲ್ಯಮಾಪನ ಮಾಡಿದೆಯೇ ? (ಮಾಡಿದ್ದಲ್ಲಿ, ಸಂಪೂರ್ಣವಾದ ಮಾಹಿತಿಯನ್ನು ನೀಡುವುದು)

# ೨೦೧೭ನೇ ಸಾಲಿನ ಡಿ.ವೈ.ಎಸ್.ಪಿ.ಗಳಿಗೆ ಪದೋನ್ನತಿ ನೀಡುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೧೧೪ (೧೦೦೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಡಿ.ವೈ.ಎಸ್.ಪಿ. ಹುದ್ದೆಗಳಿಗೆ ಪದೋನ್ನತಿ ಮತ್ತು ನೇರ ನೇಮಕಾತಿಗೆ ನಿಗದಿಪಡಿಸಿದ ಹುದ್ದೆಗಳ ಪ್ರಮಾಣವು ೫೦:೫೦ ಇದ್ದು ನಂತರ ೬೬:೩೩ಕ್ಕೆ ಇಳಿಸಲಾಗಿದ್ದು ತದನಂತರ ೮೦:೨೦ ಪ್ರಮಾಣಕ್ಕೆ ಯಾವ ನಿಯಮದ ಆಧಾರದ ಮೇಲೆ ಇಳಿಕೆ ಮಾಡಲಾಗಿದೆ ; (ಇಲಾಖಾ ಆದೇಶಗಳ ಸಹಿತ ವಿವರ ನೀಡುವುದು)

(ಆ) ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಡಿ.ವೈ.ಎಸ್.ಪಿ. ನೇಮಕಾತಿಗೆ ಶೇಕಡ ೬೬.೧/೩ ೩೩.೨/೩ ಅನುಪಾತದಲ್ಲಿದ್ದು ಕರ್ನಾಟಕ ರಾಜ್ಯದಲ್ಲಿ ಡಿ.ವೈ.ಎಸ್.ಪಿ. ನೇರ ನೇಮಕಾತಿಗೆ ಶೇಕಡ ೨೦ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಕಾರಣ ಸಹಿತ ವಿವರ ನೀಡುವುದು)

(ಇ) ಡಿ.ವೈ.ಎಸ್.ಪಿ. ಹುದ್ದೆಗಳಿಗೆ ಸಂಬಂಧಿಸಿದಂತೆ ವೇಕೆನ್ಸಿ ರಿಜಿಸ್ಟರ್‌ನಲ್ಲಿ ತಪ್ಪುಗಳಾಗಿರುವುದು ನಿಜವೇ ; ಸದರಿಯವರ ಜೇಷ್ಠತಾ ಪಟ್ಟಿಯಲ್ಲಿ ನ್ಯೂನತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಜೇಷ್ಠತಾ ಪಟ್ಟಿಯನ್ನು ಬೇಕೆಂದು ತಪ್ಪು ಮಾಡಿರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದೇ ;

(ಈ) ಸಿ ಅಂಡ್ ಆರ್ ನಿಯಮದಡಿಯಲ್ಲಿ ಡಿ.ವೈ.ಎಸ್.ಪಿ.ಗಳಿಗೆ ೨೦೦೭, ೨೨೦೮, ೨೦೧೧ರಲ್ಲಿ ನೇರ ನೇಮಕಾತಿ ಮೂಲಕ ನೇಮಕವಾಗಿರುವವರಿಗೆ ೫ ವರ್ಷದಲ್ಲಿ ಮುಂಬಡ್ತಿ ನೀಡಲಾಗಿದ್ದು, ೨೦೧೭ರಲ್ಲಿ ನೇಮಕವಾಗಿರುವವರಿಗೆ ಇದುವರೆವಿಗೆ ಮುಂಬಡ್ತಿ ನೀಡದೆ ಇರುವ ಕಾರಣಗಳೇನು ; (ವಿವರ ನೀಡುವುದು) ; ರಾಜ್ಯದಲ್ಲಿ ಐ.ಪಿ.ಎಸ್. ಅಧಿಕಾರಿಗಳಿಗೆ ಮಾತ್ರ ಪ್ರತಿವರ್ಷ ಡಿಸೆಂಬರ್ ೩೧ರಂದು ಜೇಷ್ಠತಾ ಪಟ್ಟಿ ತಯಾರಿಸಿ ಮುಂಬಡ್ತಿ

ನೀಡಲಾಗುತ್ತಿದ್ದು ಡಿವೈಎಸ್‌ಪಿಗಳಿಗೆ ಪ್ರತಿ ವರ್ಷ ಡಿವೈಎಸ್‌ಪಿಗಳ ಜೇಷ್ಠತಾ ಪಟ್ಟಿ ತಯಾರಿಸಿ ಮುಂಬಡ್ತಿ ನೀಡದೆ ಇರಲು ಕಾರಣಗಳೇನು ; ಇದರಿಂದ ರಾಜ್ಯದಿಂದ ನೇರ ನೇಮಕಾತಿ ಆಗಿರುವ ಡಿವೈಎಸ್‌ಪಿಗಳಿಗೆ ಮುಂಬಡ್ತಿ ನೀಡದೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೂಡಲೇ ಮುಂಬಡ್ತಿ ನೀಡಲಾಗುವುದೇ ;

(ಉ) ಕೆ.ಎ.ಟಿ ನ್ಯಾಯಾಲಯದ ಆದೇಶದಂತೆ ದಿ: ೩೦–೦೭–೨೦೨೪ರಂದು ರಚಿಸಲಾಗಿರುವ ಏಕ ಸದಸ್ಯ ಪೀಠವು ಕಾರ್ಯನಿರ್ವಹಿಸುತ್ತಿದ್ದು, ನ್ಯಾಯಾಲಯದ ಆದೇಶ ಬಂದು ೧೦ ತಿಂಗಳು ಆಗಿದ್ದು ಪೀಠವು ಎಷ್ಟು ದಿನದಲ್ಲಿ ವರದಿಯನ್ನು ಪಡೆದು ಜೇಷ್ಠತಾ ಪಟ್ಟಿಯನ್ನು ಯಾವಾಗ ಸಿದ್ಧಪಡಿಸಲಾಗುತ್ತದೆ ಹಾಗೂ ಮುಂಬಡ್ತಿ ನೀಡಲು ಕ್ರಮಕೈಗೊಳ್ಳಲಾಗುತ್ತದೆ ?

## ವಿಚಾರಣಾ ಆಯೋಗದ ವರದಿಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ

**ಡಾ॥ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೪ (೧೦೧೨) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಅಕ್ರಮಗಳ ತನಿಖೆಗೆ ಎಷ್ಟು ವಿಚಾರಣಾ ಆಯೋಗಗಳನ್ನು ರಚಿಸಲಾಗಿದೆ ; (ವಿವರಗಳನ್ನು ನೀಡುವುದು)

(ಆ) ಈ ವಿಚಾರಣಾ ಆಯೋಗಗಳು ತಮ್ಮ ಕೆಲಸಗಳನ್ನು ಪೂರ್ಣಗೊಳಿಸಿ, ವರದಿಗಳನ್ನು ನೀಡಿವೆಯೇ ; ನೀಡಿಲ್ಲದಿದ್ದರೆ, ಅವುಗಳ ಪ್ರಸ್ತುತ ಸ್ಥಿತಿಗತಿಗಳೇನು (ಸ್ಟೇಟಸ್) ; ಯಾವಾಗ ವರದಿಗಳನ್ನು ನೀಡಲಿವೆ ;

(ಇ) ಕೆಲವು ವಿಚಾರಣಾ ಆಯೋಗಗಳ ವರದಿಗಳು ಬಂದಿದ್ದರೆ, ಅವುಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ?

# ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳಿಗೆ ಅನುದಾನದ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) –**

೧೧೬ (೧೦೫೦) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩ನೇ ಸಾಲಿನಿಂದ ೨೦೨೬ನೇ ಸಾಲಿನವರೆಗೆ ಸರ್ಕಾರ ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ನೀಡಿರುವ ಅನುದಾನ ಎಷ್ಟು ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಆ) ಮೈಸೂರು ಜಿಲ್ಲೆ ಹಾಗೂ ಉಳಿದ ಮೂರು ಜಿಲ್ಲೆಗಳಲ್ಲಿ ಇತ್ತೀಚೆಗೆ ಹೆಚ್ಚಿನ ಪ್ರವಾಸಿಗರು ಆಗಮಿಸುತ್ತಿದ್ದು, ಇವರಿಗೆ ಬೇಕಾಗುವಂತಹ ಮೂಲ ಸೌಕರ್ಯಗಳನ್ನು ನೀಡಬೇಕಾಗಿರುವುದರಿಂದ ಪ್ರವಾಸೋದ್ಯಮ ಇಲಾಖೆಯು ಹೆಚ್ಚಿನ ಅನುದಾನವನ್ನು ನೀಡಿ, ಅಭಿವೃದ್ಧಿಪಡಿಸಲು ಯಾವ ಕ್ರಮವನ್ನು ಕೈಗೊಂಡಿದೆ ?

# ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬರುತ್ತಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೧೧೭ (೧೦೫೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಲವೆಡೆ ಡೇರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಯೂರಿಯಾ, ಸಕ್ಕರೆ, ಪೌಡರ್ ಸೇರಿದಂತೆ ಇನ್ನಿತರೆ ರಾಸಾಯನಿಕಗಳನ್ನು ಸೇರಿಸುತ್ತಿರುವುದರಿಂದ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬರುತ್ತಿರುವುದು ನಿಜವೇ ;

(ಆ) ಇದ್ದಲ್ಲಿ, ಯಾವ ಯಾವ ಜಿಲ್ಲೆಗಳ ಡೇರಿಗಳಿಗೆ ಪೂರೈಕೆ ಆಗುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದಿರುವುದನ್ನು ಪತ್ತೆ ಹಚ್ಚಲಾಗಿದೆ ; ಈವರೆವಿಗೂ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಅಲ್ಲದೆ, ಕೆಎಂಎಫ್ ಗೆ ಪೂರೈಕೆ ಆಗುತ್ತಿರುವ ಹಾಲಿನಲ್ಲಿ ಹಾಗೂ ಖಾಸಗಿ ಕಂಪನಿಗಳ ಹಾಲಿನಲ್ಲಿ ಶೇಕಡ ಎಷ್ಟು ಪ್ರಮಾಣದಲ್ಲಿ ಕಲಬೆರಕೆ ಅಂಶ ಸೇರುತ್ತಿರುವುದು ಪತ್ತೆ ಆಗಿದೆ ; (ವಿವರ ನೀಡುವುದು)

(ಈ) ಆಹಾರ ಸುರಕ್ಷಿತೆ ಮತ್ತು ಗುಣಮಟ್ಟ ಕಾಯ್ದೆಯಡಿ ಕಲಬೆರಕೆಗೊಳಿಸುವ ಅಪರಾಧಕ್ಕೆ ಪ್ರಸ್ತುತ ವಿಧಿಸಲಾಗುವ ಶಿಕ್ಷೆ ಏನು ; ಶಿಕ್ಷೆ ಪ್ರಮಾಣ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ ; ಇದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ;

(ಉ) ಕಲಬೆರಕೆ ಹಾಲನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಪೊಲೀಸ್ ನೇಮಕಾತಿ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೮ (೧೦೮೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೊಲೀಸ್ ಇಲಾಖೆಯಲ್ಲಿ ಇತ್ತೀಚಿನ ೩ ವರ್ಷಗಳಿಂದ ನೇಮಕಾತಿಗೊಳ್ಳುತ್ತಿರುವ ಪೊಲೀಸ್ ಕಾನ್‌ಸ್ಟೇಬಲ್‌ರವರ ಪೈಕಿ ಸ್ವ–ಜಿಲ್ಲೆ ಮತ್ತು ಹೊರ ಜಿಲ್ಲೆಯಿಂದ ಆಯ್ಕೆಗೊಳ್ಳುವ ಅಭ್ಯರ್ಥಿಗಳ ಶೇ. ಪ್ರಮಾಣ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಹೊರ ಜಿಲ್ಲೆಯಿಂದ ಆಯ್ಕೆಗೊಂಡ ಪೊಲೀಸ್ ಕಾನ್‌ಸ್ಟೇಬಲ್‌ಗಳು ೦೫ ವರ್ಷ, ೦೭ ವರ್ಷ ಮತ್ತು ೧೦ ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿ ಮರಳಿ ತಮ್ಮ ಸ್ವಂತ ಜಿಲ್ಲೆಗೆ ಅಂತರ್ ಜಿಲ್ಲಾ ವರ್ಗಾವಣೆ ಮೂಲಕ ತೆರಳಿದವರು ಎಷ್ಟು ; (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

(ಇ) ಈ ರೀತಿ ಒಂದು ಜಿಲ್ಲೆ/ಘಟಕಕ್ಕೆ ಪೊಲೀಸ್ ಕಾನ್‌ಸ್ಟೇಬಲ್ ಆಗಿ ಆಯ್ಕೆಗೊಂಡು ನಂತರ ಸ್ವಂತ ಜಿಲ್ಲೆಗೆ ವರ್ಗಾವಣೆಗೊಳ್ಳುತ್ತಿರುವುದರಿಂದ ಆಯ್ಕೆಗೊಂಡ ಜಿಲ್ಲೆ/ಘಟಕದವರಿಗೆ ಸಿಬ್ಬಂದಿ ಕೊರತೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಈ) ಮಂಗಳೂರು ನಗರದಲ್ಲಿ ಇತ್ತೀಚಿನ ಅಂತರ್ ಜಿಲ್ಲೆ ವರ್ಗಾವಣೆಯಿಂದಾಗಿ ಖಾಲಿ ಹುದ್ದೆಗಳ ಪ್ರಮಾಣ ಶೇ. ೨೨ಕ್ಕೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದು ನಿಯಮದ ಉಲ್ಲಂಘನೆಯಲ್ಲವೇ ;

(ಉ) ಆಯ್ಕೆಗೊಂಡ ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಒಂದೇ ಜಿಲ್ಲೆ/ಘಟಕದಲ್ಲಿ (NO TRANSFER) ಕರ್ತವ್ಯ ನಿರ್ವಹಿಸಲು ನಿಯಮಾವಳಿಯಲ್ಲಿ ಅಥವಾ ನೇಮಕಾತಿ ಅಧಿಸೂಚನೆಯಲ್ಲಿ ತಿದ್ದುಪಡಿ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ರಾಜ್ಯದಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೯ (೧೦೦೫) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷದಿಂದ ರಾಜ್ಯದಲ್ಲಿ ಇಲ್ಲಿವರೆಗೂ ಎಷ್ಟು ಸೈಬರ್ ಅಪರಾಧ ಪ್ರಕರಣಗಳು ನಡೆದಿದೆ ; (ಜಿಲ್ಲಾವಾರು ವರದಿ ನೀಡುವುದು)

(ಆ) ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯೂರೋ (ಎನ್‌ಸಿಆರ್‌ಬಿ) ಪಟ್ಟಿಯಲ್ಲಿ ಕರ್ನಾಟಕವು ಸೈಬರ್ ಅಪರಾಧ ಪ್ರಕರಣಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತೆಗೆದುಕೊಂಡ ಕ್ರಮಗಳೇನು ;

(ಇ) ಕಳೆದ ೫ ವರ್ಷದಿಂದ ಸೈಬರ್ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ದೂರುಗಳ ಸಂಖ್ಯೆಯೆಷ್ಟು ; ಎಷ್ಟು ಪ್ರಕರಣಗಳಲ್ಲಿ ಕೋರ್ಟ್ ಶಿಕ್ಷೆ ವಿಧಿಸಿದೆ ; ಎಷ್ಟು ಪ್ರಕರಣಗಳು ಖುಲಾಸೆಗೊಂಡಿದೆ ;

(ಈ) ಯಾವ ಯಾವ ರೀತಿಯಲ್ಲಿ ಸೈಬರ್ ಅಪರಾಧಗಳು ನಡೆಯುತ್ತಿದೆ ; ಈ ಜಾಲವನ್ನು ಭೇದಿಸಲು ಹಾಗೂ ಸಾರ್ವಜನಿಕರನ್ನು ಎಚ್ಚರಿಸಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ;

(ಉ) ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚಳವಾಗಿರುವುದು ಹಾಗೂ ಅಮಾಯಕರಿಗೆ ಕೋಟ್ಯಂತರ ಹಣ ವಂಚನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ಇನ್ನಿತರ ಯೋಜನೆಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೦ (೧೧೧೭) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಾ ಮೇಲ್ದಂಡೆ ಯೋಜನೆ, ಸಿಂಗಟಾಲೂರು ಏತ್ತಿನಹೊಳೆ ಯೋಜನೆ ಸೇರಿದಂತೆ ಪ್ರಮುಖ ನೀರಾವರಿ ಮತ್ತು ಹೆದ್ದಾರಿ ಯೋಜನೆಗಳಿಗೆ ಸಂಬಂಧಿಸಿದ ೫೩೦ ಭೂಸ್ವಾಧೀನ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರದ ಪರವಾಗಿ ಐತಿಹಾಸಿಕ ತೀರ್ಪು ನೀಡಿರುವುದು ನಿಜವೇ ;

(ಆ) ಈ ತೀರ್ಪಿನಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಅಂದಾಜು ೧೦ ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಉಳಿತಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಪ್ರಕರಣಗಳಲ್ಲಿ ಹೈಕೋರ್ಟ್ ನೀಡಿದ್ದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ವಿಳಂಬವಾಗಿದ್ದರೂ, ಸಾರ್ವಜನಿಕ ಹಿತದೃಷ್ಟಿಯಿಂದ ಸುಪ್ರೀಂ ಕೋರ್ಟ್ ಇದನ್ನು ಪುರಸ್ಕರಿಸಲು ಕಾರಣಗಳೇನು ;

(ಈ) ಈ ತೀರ್ಪಿನಿಂದಾಗಿ ಬಾಕಿ ಉಳಿದಿರುವ ಪ್ರಮುಖ ಮೂಲಸೌಕರ್ಯ ಯೋಜನೆಗಳ ಅನುಷ್ಠಾನಕ್ಕೆ ವೇಗ ಸಿಗಲಿದೆಯೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಕಾ.ಸೂ. – ಪ್ರತಿಗಳು

**List of Questions for Oral Answers**

**Total No. of Questions - 15**

# LIST - 08

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## ( Adjourned Meetings )

## Thursday, the 12th March, 2026

---

**GROUP - IV**

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology

---

### POOR MAINTENANCE OF PUBLIC TOILETS IN THE LIMITS OF GREATER BENGALURU AUTHORITY (GBA)

**Dr. Arathi Krishna (Nominated) -**

106 (1102) Will the Deputy Chief Minister be pleased to state :-

(a) whether any non governmental organizations have submitted a report to setright the poor maintenance of the public toilets in the limits of Greater Bengaluru Authority (GBA) ; if so, the steps taken in this regard ;

(b) whether it has come to the notice of the Greater Bengaluru Authority (GBA) that the excess fee is being collected more than the prescribed fee in the said public toilets ; if so, the step that is being taken by the Government with regard to such cases ;

(c) since the separate toilet facility has been provided to women in the said public toilets, whether the CCTV cameras have been installed in all public toilets for their safety ; if not, the reasons for the delay so far ?

## COLLECTION OF REVENUE BY THE EXCISE DEPARTMENT

**Sri. Nagaraju M. (Elected by Legislative Assembly) -**

107 (1079) Will the Minister for Excise be pleased to state :-

(a) approximately Rs.40,000/- crores target has been prescribed for the year 2025-26 by the Excise Department, whether it is true that approximately Rs.33,000/- crores of estimation of revenue has been accrued by January-2026 ; if not, the actual revenue that has been accrued by the department ; the reasons for which the quantum of sale of liquor that has been declined despite higher levy ;

(b) whether it is true that the sale of liquor is slowing down due to the taxes are being increased on liquor repeatedly by the Government ; if so, whether the Government would stop the increase of tax in the budget of 2026-27 to prevent further declining in the demand of liquor ;

(c) the measures taken by the special task force of the department to prevent the inflow of fake liquor from Goa and mixed liquor like "CH powder" (cloral hydrate) from Andra Pradesh into districts like Belagavi and Raichur ?

## REGARDING RECRUITMENTS IN VARIOUS DEPARTMENTS

**Sri. Shashil G. Namoshi (Teachers' Constituency) -**

108 (1122) Will the Chief Minister be pleased to state :-

(a) whether it is true that more than 2.84 lakhs of posts are lying vacant in various departments of the State Government at present ; if so, the particulars of financial

and administrative problems being faced by the Government while providing public service due to abundant quantum of posts are lying vacant ;

(b) the measures taken by the Government as not facing the social, financial and administration problems while providing public service due to the vacant posts ;

(c) As per the oral order of the Hon'ble High Court until the current 56% of reservation case is resolved whether the recruitments can be made under old 50% reservation and roster; the stand of the Government in this regard ;

(d) the provision of 5 years age relaxation has been provided due to the delay in recruitment, benefit of relaxing the age limit, if any recruitment has not been done, whether age relaxation would be extended again till the upcoming recruitments notification would be issued ? (clarification be furnished)

**HOUSING CO-OPERATIVE SOCIETIES**

**Sri. Ramojigowda (Graduates' Constituency) -**

109 (1048) Will the Chief Minister be pleased to state :-

(a) the total number of housing co-operative societies in Bengaluru ; (details along with name and address be furnished)

(b) the number of years from which these co-operative societies are functioning ; (details be furnished)

(c) the extent of land that has been purchased by these co-operative societies for the allocation of sites ; the investment for the same ; (complete details be furnished)

(d) the number of site holders to whom the site has been allotted by these housing co-operative societies ; (details alongwith name, address and dimensionof site be furnished)

(e) whether it has come to the notice of the Government that site holders are being cheated from number of year without allocation of site ; if so, the step taken by the Government ; (details be furnished)

(f) whether the step has been taken as per Real Estate Regulatory Authority (RERA) Act with regard to misappropriation of crores of rupees by these co-operative societies without allocation of sites to their members ?

## REPORT OF THE HARANAHALLI RAMASWAMY COMMISSION WITH REGARD TO ADMINISTRATIVE REFORMS

**Smt. Bharathi Shetty (Nominated) -**

110 (1081) Will the Chief Minister be pleased to state :-

(a) the particulars of reports that have been received from the Haranahalli Ramaswamy Commission so far with regard to administrative reforms in the State ; (till the report submitted including the recent report of Sri. T.M. Vijay Bhaskar, Former Chief Secretary and the report by Sri. Deshpande, Deputy Chairman of the Planning Commission)

(b) the information on the facts that have been adopted on the basis of these type of various reports by the Government be furnished ;

(c) the detailed information with regard to the facts which are under consideration by the Government be furnished ;

(d) the details with regard to recommendations that have been mentioned to merge some of the departments with other departments regarding the administrative reforms be furnished ; the reasons for not taking any steps by the Government in this regard so far ?

## THE ACQUISITION OF PROPERTIES BELONGING TO THE MUSLIM MINORITIES COMMUNITY IN BAGALKOT CITY

**Sri. P.H. Pujar (Local Authorities Constituency) -**

111 (1126) Will the Deputy Chief Minister be pleased to state :-

(a) the total number of sites that have been provided for muslim minorities communities in unit-1&2 by the Bagalkot Town Development Authority (BTDA) till date ; (site number, extent of site, sectorwise information be furnished)

(b) the number of properties such as mosque, darghas, madarasa, edgas etc that have been acquired which are belonging to muslim minorities community in Bagalkot city with regard to upper Krishna Project ; (wardwise and extensionwise detailed separate information like name of the said properties which have been acquired, and property number be furnished)

(c) the detailed and separate information of the number of alternative sites that have been allotted by the Bangalkot Town Development Authority (BTDA) for the reconstruction of the said properties in Navanagar of Bagalkot due to submerging of the said properties, the extent area of each property, sectorwise and unitwise along with the names of the said properties including the date of issue be furnished ;

(d) the particulars of sites in which the permission has been provided by the BTDA for construction of building ? (in this regard the details of unit-number, sector number, site number and dates of permission be furnished)

## CABINET RANK STATUS FOR THE CHAIRMANS OF CORPORATIONS, BOARDS AND AUTHORITIES

**Sri. Chidanand M. Gowda (Graduates' Constituency) -**

112 (1103) Will the Chief Minister be pleased to state :-

(a) the number of Corporation, Board and Authorities in the State ; (complete details be furnished)

(b) the total number of ministers in the State ; the number of legislators to whom the cabinet rank status and the status of minister for the State rank has been provided ; the number of non-legislators to whom the cabinet rank status and status of minister for the State rank has been provided ; (complete details be furnished)

(c) the facilities that have been provided for the persons who have cabinet rank status ; the expenditure that will be incurred for the same annually ; (statuswise separate details be furnished)

(d) the grant that has been provided by the Government to Corporation, Board and Authorities in the State during the last 3 years ; the revenue that has been accrued to the exchequer of the Government from the same ;

(e) since the status of cabinet rank is being provided for the Chairmans of Corporation, Board and Authorities, whether it will cause hardship for the implementation of the schemes by shortage of grant to the same ?

## REGARDING OPENING OF BANK ACCOUNT

**Sri. S.L. Bhojegowda (Teachers' Constituency) -**

113 (1072) Will the Chief Minister be pleased to state :-

(a) whether the directions have been given by the Finance Department for opening of new bank account ; if so, whether the same directions are being complied by the departments ; if not, the details of the action taken against them ; (complete information be furnished)

(b) the number of departments, local bodies (R.D.P.R and Urban Local Bodies) Authorities, Boards, Corporations and Societies that have obtained the consent/approval of the Finance Department for the bank accounts that have been opened after 30-01-2017 as per the Government order No.FD/05/T.A.R/2017 Date: 30.01.2017 ; if so, complete information be furnished ;

(c) it has been instructed to State Government Department, Local Bodies (RDPR and Urban Local Bodies), Authorities, Boards, Corporations and Societies for providing informations within one month with regard to existing bank accounts including statistics to the Principal Accountant General, Karnataka State Audit and Accounts Department as per the order of the Government ; whether the information has been provided according to the said order ; (information including statistics be furnished)

(d) as per the order of the Government, whether the Karnataka State Audit and Accounts Department has instructed for obtaining the statistics of accounts by the banks within six months that have been held by the State Government department, Local Bodies (RDPR and Urban Local Bodies), Authorities, Boards, Corporations and Societies, whether the information has been obtained as per the said order ; the information including statistics be furnished ;

(e) whether the Karnataka State Audit and Accounts Department has audited the statistics that has been obtained as per the above order ? (if so, complete information be furnished)

## PROMOTION TO Dy.S.Ps OF THE YEAR 2017

**Sri. Puttanna (Teachers' Constituency) -**

114 (1007) Will the Minister for Home be pleased to state :-

(a) 50:50 ratio has been prescribed for the promotion and the direct recruitment for the posts of Dy.S.P in the State, later it has been reduced to 63:33, there after the particular of rule based on which the same has been reduced to the ratio of 80:20 ; (details alongwith order of the departments be furnished)

(b) there is 66.1/3, 33.2/3 percentage of ratio for the recruitment of Dy.S.P in Telangana and Andra Pradesh States, whether it has come to the notice of the Government that more than 20% of ratio has been prescribed for the direct recruitment of Dy.S.P in Karnataka State ; (details alongwith reasons be furnished)

(c) whether it is true that there are mistakes in the vacancy register regarding Dy.S.P posts ; whether it has come to the notice of the Government that there are defects in the seniority list of the said persons ; whether the disciplinary action would be taken against the officers who have made mistakes intentionally in the seniority list ;

(d) the promotion has been given within 5 years for Dy.S.P who have been appointed through the direct recruitment in 2007, 2008 and 2010 under C & R rule, the reasons for the promotion has not been given for the persons who have been appointed in 2017 (details be furnished); the promotions are being given only for I.P.S officers in the State by preparing seniority list on 31$^{st}$ December every year, the reasons for the promotion has not been given for Dy.S.Ps by preparing seniority list of every year ; whether it has come to the notice of the Government that the injustice is being caused by not giving promotion for Dy.S.Ps who have been appointed through the direct recruitment from the State ; if so, whether the promotion would be given immediately ;

(e) single member bench is functioning that has been constituted on 30.07.2025 as per the order of the Karnataka Appellate Tribunal and 10 months have been elapsed by issuing the order of the same, the date on which and the number of days in which the seniority list would be prepared by getting the report and the step would be taken to give promotion ?

## MEASURES TAKEN AGAINST THE REPORTS OF THE INQUIRY COMMISSION

**Dr. K. Govindaraj (Elected by Legislative Assembly) -**

115 (1012) Will the Chief Minister be pleased to state :-

(a) the number of Inquiry Commissions that have been constituted to investigate various irregularities during the last 3 years ; (details be furnished)

(b) whether the reports have been submitted by the these Inquiry Commissions by completing their works ; if not, the present status thereof ; the date on which the reports would be submitted ;

(c) if some of the reports of these Inquiry Commissions have been received, the action taken in this regard ?

## GRANT TO MYSURU, MANDYA, HASSAN AND CHAMARAJANAGAR DISTRICT

**Sri. K. Vivekananda (Teachers' Constituency) -**

116 (1050) Will the Minister for Law, Parliamentary Affairs and Legislation and Tourism be pleased to state :-

(a) the grant that has been provided from the Government for the development of tourism in Mysuru, Mandya, Hassan and Chamarajanagar district from the year 2023 to 2026 ; (talukwise detailed information be furnished)

(b) in the recent days the large number of tourists are visiting to Mysuru district and other three districts, since the necessary basic facilities would be provided to them, the steps taken by the Tourism Department to develop the same by providing more grant ?

## REGARDING ADULTERATION OF MILK

**Sri. Madhu G. Madegowda (Graduates' Constituency) -**

117 (1054) Will the Chief Minister be pleased to state :-

(a) whether it is true that the adulterants like urea, sugar, powder including other chemicals are being found in the milk that has been supplied in some dairies ;

(b) if so, the particulars of the dairies in the districts in which adulterants of milk supplied has been detected ; the number of cases that have been registered till date ; (complete details be furnished)

(c) also, the quantum of adulterants that has been detected in the milk which is being supplied to KMF and private milk companies ; (details be furnished)

(d) the current punishment that has been imposed for the offence of adulterations under Food Safety and Standards Act ; whether the Government has intended to increase the punishment ; if so, complete information be furnished ;

(e) the steps taken by the Government to prevent the adulteration in milk ?

## REGARDING POLICE RECRUITMENT

**Sri. Kishor Kumar Puttur (Local Authorities Constituency) -**

118 (1082) Will the Minister for Home be pleased to state :-

(a) out of the Police Constable who are being recruited in the Police Department during the last 3 years, the percentage of candidates who have been appointed from their own district and other districts ; (districtwise details be furnished)

(b) the number of Police Constables who have been selected from other districts have returned to their home districts through inter-district transfers after serving for 05 years, 07 years and more than 10 years ; (districtwise and yearwise information be furnished)

(c) since there is transferring to own district after appointing as Police Constable to a district/unit in this manner, whether it has not come to the notice of the Government that the shortage of staff is being caused to the appointed district/unit ;

(d) whether it has come to the notice of the Government that the percentage of vacant posts in Mangaluru city has been increased to 22% due to the recent inter-district transfer ; if so, whether it is violation of the rule ;

(e) whether the step would taken by the Government to bring the amendment in the rules or recruitment notification to perform the duty in the same district/ unit (no transfer) where they have beenappointed as Police Constables ?

## INCREASE OF CYBER CRIMES IN THE STATE

**Sri. Govinda Raju (Elected by Legislative Assembly) -**

119 (1005) Will the Minister for Home be pleased to state :-

(a) the number of cyber crime cases that have been occurred in the State from the last 5 years till date ; (districtwise report be furnished)

(b) whether it has come to the notice of the Government that the Karnataka has secured top place in cyber crime cases in the list of National Crime Records Bureau (NCRB) ; if so, the steps taken for the same ;

(c) the number of complaints that have been lodged regarding cyber crime cases during the last 5 years ; the number cases in which the punishment has been awarded by the court ; the number of cases that have been dismissed ;

(d) the manner in which the cyber crimes are being occurred the programmes taken by the Government to crackdown this networks and alert the public ;

(e) whether it has come to the notice of the Government that there is an increasing of digital arrest cases in the State and the innocent people are cheated of crores of rupees ; if so, the steps taken by the Government in this regard ?

## REGARDING UPPER KRISHNA PROJECT AND OTHER PROJECTS

**Sri. Thippanappa Kamaknoor (Elected by Legislative Assembly) -**

120 (1117) Will the Deputy Chief Minister be pleased to state :-

(a) whether it is true that historical judgment has been awarded by the Supreme Court in favour of the State Government in 530 land acquisition cases with regard to the major irrigation and highway projects including the Upper Krisha Project, Singataluru and Yettinahole Project ;

(b) whether it has come to the notice of the Government that approximately Rs.10,000/- crore rupees of amount is being saved to the exchequer of the Government from this judgment ;

(c) even though there was a delay in filing an appeal in the Supreme Court against the judgment that has been awarded by the High Court in these cases, the reasons for entertaining the same by the Supreme Court in the interest of public ;

(d) whether it would speed up the implementation of remaining major infrastructure projects from this judgment ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD-763 Copies